ಹೊಸ ದಿಗಂತ

ಶುಕ್ರವಾರ, 25 ಅಕ್ಟೋಬರ್ 2024,

ಅ. 27 ವಿಶೇಷಚೇತನರಿಗೆ ಒಂದು ದಿನ ಕಾರ್ಯಕ್ರಮ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿಶೇಷಚೇತನರಿಗಾಗಿ ಅ. 27 ರಂದು ಬೆಳಗ್ಗೆ 9 ಗಂಟೆಗೆ ಜಿಕೆವಿಕೆ ಆವರಣದಲ್ಲಿ ಕೃಷಿ ಪರಿಸರದಲ್ಲಿ ವಿಶೇಷಚೇತನರೊಂದಿಗೆ ಒಂದು ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿಶೇಷಚೇತನರೂ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದು, ಅವರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸುವ ಜವಾಬ್ದಾರಿ ಸರ್ಕಾರ ಮತ್ತು ಸಂಘ ಸಂಸ್ಥೆಗಳ ಮೇಲಿದೆ. ಆದಾಗ್ಯೂ, ಅಲ್ಲಲ್ಲಿ ಈ ಅವಕಾಶ ವಂಚಿತರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ನ.14 ರಿಂದ 17ರ ವರೆಗೆ ಆಯೋಜಿಸಿರುವ ವಿಶ್ವವಿದ್ಯಾನಿಲಯದ ವಾರ್ಷಿಕ ಕೃಷಿಮೇಳಕ್ಕೆ ಲಕ್ಷಾಂತರ ಕೃಷಿಕರ ನಿರೀಕ್ಷೆಯಲ್ಲಿದ್ದು, ಎಲ್ಲೋ ಒಂದೆಡೆ ಈ ಬೃಹತ್ ಮೇಳಕ್ಕೆ ಹೆಚ್ಚಿನ ಜನಸಂದಣಿ ಇರುವ ಕಾರಣದಿಂದ ದೈಹಿಕ ವಿಶೇಷಚೇತನರ ಭಾಗವಹಿಸುವಿಕೆ ಕಷ್ಟಸಾಧ್ಯವಾಗಿರುವ ಹಿನ್ನಲೆಯಲ್ಲಿ ಕೃಷಿಮೇಳದ ಪೂರ್ವದಲ್ಲಿಯೇ ಜಿಕೆವಿಕೆ ಆವರಣವನ್ನು ಹಾಗೂ ಅಲ್ಲಿಯ ಪರಿಸರ, ವೈವಿಧ್ಯಮಯ ಬೆಳೆ, ಬೆಳೆಪದ್ಧತಿಗಳನ್ನು, ಉದ್ಯಾನಗಳನ್ನು ವೀಕ್ಷಣೆಗೆಗಾಗಿ ಕೃಷಿ ಪರಿಸರದಲ್ಲಿ ಒಂದು ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ವಿಶೇಷಚೇತನರಿಗಾಗಿಯೇ ಪರಿಸರ ವೀಕ್ಷಣೆಯೊಂದಿಗೆ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಮಳೆಗೆ ಕೊಳೆತು ಹೋದ ಟೊಮೆಟೊ

ಮಾರುಕಟ್ಟೆಯಲ್ಲಿ ಗಗನಕ್ಕೇರಿದ ಕೆಂಪು ಹಣ್ಣು | ಬೆಳೆ ಬೆಳೆದ ರೈತನಿಗೆ ಲಕ್ಷಾಂತರ ರೂಪಾಯಿ ನಷ್ಟ

• ತಾವರೆಕೆರೆಟಿ.ನಾಗರಾಜ್

ತಾವರೆಕೆರೆ: ಕೆಲ ದಿನಗಳ ಹಿಂದೆ ಟೊಮೆಟೊ ಬೆಳೆದ ರೈತರ ಮೊಗದಲ್ಲಿ ಮಂದಹಾಸ ಕಾಣುತ್ತಿದ್ದ ಆದರೆ ಹಿಂಗಾರು ಮಳೆಯ ಅವಾಂತರದಿಂದ ತೋಟಗಳಿಗೆ ನೀರು ನುಗ್ಗಿ ಬೆಳೆಯೆಲ್ಲಾ ನೀರಿನಲ್ಲಿ ಮುಳುಗಿ ಹೋಗಿದೆ. ಇದೀಗ ಕೆಲವು ತೋಟಗಳಲ್ಲಿ ಟೊಮೊಟೊ ಕೊಳೆತು .ಹೋಗಿದೆ. ಇದರ ಪರಿಣಾಮ ಟೊಮೊಟೊ ಮಾರುಕಟ್ಟೆಯಲ್ಲಿ ದರ ಗಗನಕ್ಕೇರಿದೆ. ರೈತರು ಲಕ್ಷಾಂತರ ರೂಪಾಯಿ ರೂ.ಸಾಲ ಮಾಡಿ ಟೊಮೊಟೊ ಬೆಳೆಗೆ 3 ವರ್ಷದಿಂದ ನಷ್ಟ ಅನುಭವಿಸುತ್ತ ಸಾಲಗಾರರಾಗಿದ್ದಾರೆ.

ಕಳೆದ ಆಗಸ್ಟ್ ತಿಂಗಳಲ್ಲಿ ಕಡಿಮೆಯಾಗಿದ್ದ ಟೊಮೊಟೊ ದರ ದಿಢೀರನೆ ಸೆಪ್ಟೆಂಬರ್‌ನಲ್ಲಿ ಹೆಚ್ಚಳವಾಗಿ ಕಳೆದ ವರ್ಷ ಹೋಲಿಸಿದರೆ ಸ್ವಲ್ಪ ಬೆಲೆಯಲ್ಲಿ ಚೇತರಿಕೆ ಕಂಡು ಬಂದಿತ್ತು.ಈ ಬಾರಿ ಟೊಮೊಟೊ ಬೆಳೆ ಬಂಪರ್ ಬೆಳೆ ಆಗಿದ್ದು ರೈತರು ತಮ್ಮ ಹಿಂದಿನ ವರ್ಷಗಳ ಸಾಲಗಳೆಲ್ಲ ತೀರುವ ನಿರೀಕ್ಷೆಯಲ್ಲಿದ್ದರು. ಆದರೆ ಹಿಂಗಾರು ಮಳೆಯ ಅವಾಂತರದಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.



ದಿಗಂತ ವಿಶೇಷ

15 ಕೆ.ಜಿ ಬಾಕ್ಸ್ ಸಾಧಾರಣ ಟೊಮೆಟೋ 800 ರಿಂದ 950 ರೂ.ಇದೆ.ಉತ್ತಮವಾದ ಟೊಮೊಟೋ15 ಕೆಜಿ ಬಾಕ್ಸ್‌ಗೆ 1,200 ಸಾವಿರದಿಂದ 1,500 ರೂ. ಗಳಾಗಿದೆ. 4 ಎಕರೆಯಲ್ಲಿ ಬೆಳೆಯಲು ಸುಮಾರು 16 ರಿಂದ 18 ಲಕ್ಷ ಖರ್ಚಾಗಿದೆ. ಸರಿಯಾದ ಬೆಳೆ ಆಗಿದ್ದರೂ ಮಳೆಯ ಕಾರಣ ಕೊಳೆತು ಹೋಗಿದೆ. ಹೀಗಾಗಿ ಉಳಿದ ಹಣ್ಣು ಮಾರುಕಟ್ಟೆಗೆ ಕಳಿಸಬೇಕಾಗುತ್ತದೆ.ಆದರೆ ಅಲ್ಲಿ ದಲ್ಲಾಳಿಗಳ ಕಮಿಷನ್ ಹೋಗಿ ಕೈಗೆ ಹಾಕಿದ ಬಂಡವಾಳ ಸಿಗದೆ ಬಂಡವಾಳಕ್ಕೆ ಬಡ್ಡಿ ಕಟ್ಟದೆ ಸಾಯುವ ಸ್ಥಿತಿ ತಲುಪಿದ್ದೇವೆ ಎಂದು ರೈತರು ಅಳಲು ತೋಡಿಕೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ರೀತಿ ಮಳೆಯಾದರೆ ಟೊಮೊಟೊ ಬೆಳೆ ಬೆಳೆಯುವುದೇ ಬೇಡವೆಂದು ರೈತರು ನಿರ್ಧರಿಸಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ಕುಟುಂಬ ಪೋಷಿಸುವುದುಕ್ಕಾದರೂ ಹಣ ಉಳಿಯದಿದ್ದರೆ ಇಂತಹ ವ್ಯವಸಾಯ ಏಕೆ ಮಾಡಬೇಕು ಎಂದು ರೈತರು ಪ್ರಶ್ನೆ ಮಾಡುತ್ತಿದ್ದಾರೆ. ಈ ಟೊಮೊಟೊಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ದರವಿರುವುದರಿಂದ ದಲ್ಲಾಳಿಗಳಿಗೆ ಕೈತುಂಬಾ ಕಮಿಷನ್ ಹೋಗುತ್ತದೆ. ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದ ರೈತನಿಗೆ ಏನು ಸಿಗದೆ ನೋವು ಅನುಭವಿಸುತ್ತಿದ್ದೇವೆ. ಈ ಬಾರಿ ಗಗನಕ್ಕೇರಿದ ಟೊಮೊಟೊ ಬೆಲೆ ಕಂಡು ನಮ್ಮ ಸಾಲಗಳೆಲ್ಲಾ ತೀರಲಿದೆ ಎಂಬ ನಿರೀಕ್ಷೆಯಲ್ಲಿದ್ದೇವು. ಆದರೆ ಅದು ಹುಸಿಯಾಯಿತು ಎಂದು ರೈತರು ಬೇಸರ ವ್ಯಕ್ತಪಡಿಸಿದ್ದಾರೆ.

> "ಹಿಂಗಾರು ಮಳೆಯ ಕಾಟದಿಂದ ಬೆಳೆದ ಅಲ್ಪ ಸ್ವಲ್ಪ ಟೊಮೊಟೊಕ್ಕೆ ದರ ಸಿಕ್ಕರು ಬೆಂಬಿಡದೆ ಸುರಿಯುತ್ತಿರುವ ಈ ಮಳೆಯ ಕಾರಣದಿಂದ ಟೊಮೊಟೊ ಹಣ್ಣು ಗಿಡದಲ್ಲಿ ಕೊಳೆತು ಉದುರುತ್ತಿದೆ ಇದನ್ನುಕಂಡು ಬೆಳೆ ಬೆಳೆಯುವುದು ಸಾಕು ಎನಿಸುತ್ತಿದೆ .
>
> ■ ದೇವರಾಜ್ ಚಿಕ್ಕನಹಳ್ಳಿ, ರೈತ

Udayavani Pg.04

ಸಾವಯುವ ಕೃಷಿಯಿಂದ ಜೈವಿಕ ಸರಪಳಿ ಉಳಿವು: ಪಾಟೀಲ್

'ಭವಿಷ್ಯದ ಸುಸ್ಥಿರ ಜೈವಿಕ ಕೃಷಿ ಅಭಿವೃದ್ಧಿ' ಕುರಿತು ಗೋಷ್ಠಿ

■ **ಉದಯವಾಣಿ ಸಮಾಚಾರ**

ಬೆಂಗಳೂರು : ಸಾವಯುವ ಹಾಗೂ ಜೀವ ವೈವಿಧ್ಯ ಸಂರಕ್ಷಣಾ ಕೃಷಿ ವಿಧಾನಗಳನ್ನು (ಬಯೋಡೈನಮಿಕ್) ಒಪ್ಪಿ ಅನುಸರಿಸಿದಾಗ ಮಾತ್ರ ಪ್ರಕೃತಿಯ ಜತೆಗೆ ಜೈವಿಕ ಸರಪಳಿ ಉಳಿವು ಸಾಧ್ಯ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ದೊಮ್ಮಲೂರಿನ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಬಯೋ ಡೈನಾಮಿಕ್ ಅಸೋಷಿ ಯೇಷನ್ ಆಫ್ ಇಂಡಿಯಾ 25ನೇ ವರ್ಷಾಚರಣೆ ಅಂಗವಾಗಿ ಮಂಗಳವಾರ ಏರ್ಪಡಿಸಿದ್ದ 'ದೇಶದಲ್ಲಿ ಭವಿಷ್ಯದ ಸುಸ್ಥಿರ ಜೈವಿಕ ಕೃಷಿ ಅಭಿವೃದ್ಧಿ' ಕುರಿತು ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.



ಮಣ್ಣಿನ ಫಲವತ್ತತೆ ಹಾಗೂ ಜೀವ ವೈವಿಧ್ಯತೆ ಸಂಕುಲಗಳ ಉಳಿವಿಗೆ ಸಾವಯುವ, ಜೈವಿಕ ಕೃಷಿ ವಿಧಾನ ಅಳವಡಿಕೆಯನ್ನು ಉತ್ತೇಜಿಸಬೇಕಿದೆ. ಈ ನಿಟ್ಟಿನಲ್ಲಿ, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ವಿದ್ಯಾರ್ಥಿಗಳು ವಿಶೇಷ ಒತ್ತು ನೀಡಿ ರೈತರಲ್ಲಿ ಜಾಗೃತಿ ಮೂಡಿಸಬೇಕು. ರಾಸಾಯನಿಕ ಮುಕ್ತ ರಾಜ್ಯವಾಗಿ ಸಿಕ್ಕಿಂ ಅಗ್ರಸ್ಥಾನದಲ್ಲಿದೆ. ಆ ನಿಟ್ಟಿನಲ್ಲಿ ಕರ್ನಾಟಕವನ್ನು ಕೊಂಡೊಯ್ಯಬೇಕಿದೆ ಎಂದರು.

ನಗರ ಭಾಗದ ಮಕ್ಕಳಿಗೆ ಕೃಷಿ ಪ್ರವಾಸ: ರಾಜ್ಯದಲ್ಲಿ ಅತ್ಯುತ್ತಮವಾದ ಆಯ್ದ ಸಾವಯುವ, ಜೈವಿಕ ಕೃಷಿ ಜಾಗಗಳನ್ನು ಗುರುತಿಸಿ ಕೃಷಿ ಪ್ರವಾಸೋದ್ಯಮದಲ್ಲಿ ಅಳವಡಿಸುವ ಮೂಲಕ ಪ್ರವಾಸಿಗರ ಭೇಟಿಗೆ ಅವಕಾಶ ಕಲ್ಪಿಸಲಾಗುವುದು. ಬೆಂಗಳೂರು ನಗರ ಭಾಗದ ಮಕ್ಕಳಿಗೆ ಕೃಷಿ ಪ್ರವಾಸ ಆಯೋ ಜಿಸಿ ಪ್ರೋತ್ಸಾಹಿಸಲಾಗುವುದು. ರಾಸಾಯನಿಕ ಕೃಷಿ ಪದ್ಧತಿಗೆ ಪರ್ಯಾ ಯವಾಗಿ ಸಾವ ಯುವ, ಜೀವ ವೈವಿಧ್ಯ ಕೃಷಿಗೆ ಪೂರಕವಾಗಿ ಬಯೋ ಡೈನಾಮಿಕ್ ಅಸೋಸಿಯೇಷನ್ ಸೂಕ್ತವಾದ ನೀತಿಯನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಬಯೋಡೈನಾಮಿಕ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ಕೆ.ಸಿ.ಚಂದ್ರಶೇಖರನ್ ಮಾತನಾಡಿ, ಸಾಂಪ್ರಾದಾಯಿಕ, ಸುಸ್ಥಿರ ಕೃಷಿಗೆ ಪ್ರೋತ್ಸಾಹ ಬೇಕಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕೃಷಿಕ ಹಾಗೂ ಹಿರಿಯ ಸಾಹಿತಿ ಎಸ್ .ಜಿ.ಸಿದ್ದರಾಮಯ್ಯ,ಬಿಡಿಎಐನ ಉಪಾಧ್ಯಕ್ಷ ಬಾಬು, ಖಜಾಂಚಿ ಸ್ಯಾಮುಯಲ್ ಮೋಹನ್, ಜಯರಾಮ್, ಮಹೇಶ್ ಮೆಲ್ವಿನ್ ಹಾಗೂ ವಿವಿಧ ರಾಜ್ಯಗಳ ಸಾವಯುವ ಕೃಷಿಕರು, ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

KannadaPrabha Pg.03

ಇಂದು ಮೇವು ಮೇಳ

ಬೆಂಗಳೂರು: ಹೆಬ್ಬಾಳದ ಪಶುವೈದ್ಯಕೀಯ ಕಾಲೇಜು ಬಾಲಕರ ಹಾಸ್ಟೆಲ್ ಮೈದಾನದಲ್ಲಿ ಮೇವು ಚಟುವಟಿಕೆಗಳ ಕುರಿತ ವಸ್ತು ಪ್ರದರ್ಶನ ಹಾಗೂ ತಜ್ಞರೊಂದಿಗೆ ಸಂವಾದ ನಡೆಸುವ 'ಮೇವು ಮೇಳ' ಅ.25ರಂದು ಬೆಳಗ್ಗೆ 10 ಗಂಟೆಯಿಂದ ನಡೆಯಲಿದೆ. ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಭಾರತೀಯ ಡೈರಿ ಅಸೋಸಿಯೇಷನ್‌ನ ದಕ್ಷಿಣ ವಲಯದ ಆಶ್ರಯದಲ್ಲಿ ಮೇವು ಮೇಳ ಹಮ್ಮಿಕೊಳ್ಳಲಾಗಿದೆ. ಬೀದರ್ ಪಶು ವಿವಿ ಕುಲಪತಿ ಪ್ರೊ. ಕೆ.ಸಿ.ವೀರಣ್ಣ ಮೇಳ ಉದ್ಘಾಟಿಸುವರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್, ಐ.ಸಿ.ಎ.ಆರ್-ಅಟಾರಿಯ ನಿರ್ದೇಶಕ ಡಾ। ವಿ. ವೆಂಕಟಸುಬ್ರಮಣಿಯನ್, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಯುಕ್ತರಾದ ಶ್ರೀರೂಪಾ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

Seed sector meet to focus on public-private partnership

The 13th edition of the National Seed Congress (NSC), an annual conclave of researchers, policymakers, farmers, industries and scientists in the sector, will be held in Varanasi from November 28 to 30. The NSC will deliberate on the progress and growing new interest in public-private partnerships in seed business. Discourses on formulating a road map for sustainable growth of the seed sector in the country is also among its key objectives.

The Hindu
Pg.16

ಅಡಿಕೆಗೆ ಎಲೆಚುಕ್ಕಿ ರೋಗದ ಭೀತಿ

•ರಮೇಶ್, ಕರುವಾನೆ

ದಿಗಂತ ವಿಶೇಷ

ಶೃಂಗೇರಿ: ಮಲೆನಾಡು ಭಾಗದಲ್ಲಿ ಈ ಬಾರಿ ಅತಿಯಾದ ಮಳೆಯಿಂದಾಗಿ ರೈತರ ಅಡಿಕೆ ತೋಟಗಳಲ್ಲಿ ಕೊಳೆ ರೋಗ, ಎಲೆಚುಕ್ಕಿ ರೋಗದಿಂದಾಗಿ ಬೆಳೆ ನಷ್ಟವಾಗಿ ಮ್ಯಾಮ್ಕೋಸ್‌ನ ನಂತಹ ಸಹಕಾರ ಸಂಸ್ಥೆಗಳಿಗೆ ಅಡಿಕೆ ಹಾಕಲಾಗದೇ ತಮ್ಮ ಸದಸ್ಯತ್ವ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಶೃಂಗೇರಿ ತಾಲೂಕಿನಲ್ಲಿ ಕಳೆದ ವರ್ಷ 102 ಇಂಚು ಮಳೆಯಾಗಿತ್ತು. ಈ ವರ್ಷ ಈಗಾಗಲೇ 172 ಇಂಚು ಮಳೆಯಾಗಿದೆ. ತಾಲೂಕಿನ ದೂರದ ಮತ್ತು ಒಳನಾಡು ಪ್ರದೇಶವಾದ ಕೆರೆಕಟ್ಟೆಯಲ್ಲಿ 260 ಇಂಚು ಮಳೆಯಾದರೆ ಕಿಗ್ಗಾದಲ್ಲಿ 210 ಇಂಚು ಮಳೆ ದಾಖಲಾಗಿದೆ. ಈ ಪ್ರಮಾಣದಲ್ಲಿ ಮಳೆ ಜಾಸ್ತಿಯಾದ ಹಿನ್ನಲೆಯಲ್ಲಿ ಬೆಳೆ ನಷ್ಟವಾಗುವ ಸಾಧ್ಯತೆ ದಟ್ಟವಾಗಿದೆ. ಒಂದೆಡೆ ಕೊಳೆರೋಗ ವ್ಯಾಪಿಸಿದರೆ ಮತ್ತೊಂದೆಡೆ ಬಿಸಿಲು ಮತ್ತು ಬಿಟ್ಟು ಬಿಟ್ಟು ಬರುತ್ತಿರುವ ಮಳೆಯಿಂದಾಗಿ ಎಲೆಚುಕ್ಕಿ ರೋಗದ ತೀವ್ರತೆ ಜಾಸ್ತಿಯಾಗಿರುತ್ತದೆ. ಇದರಿಂದಾಗಿ ಬೆಳೆಗಾರರು ಅಡಿಕೆ ತೋಟಕ್ಕೆ ಹೋಗಲಾರದ ಸ್ಥಿತಿ ನಿರ್ಮಾಣವಾಗಿದೆ. ಪರಿಣಾಮ ಸೊಸೈಟಿಗಳಿಗೆ ಅಡಿಕೆ ಹಾಕಲು ವಿಫಲರಾಗುವ ಸಂಭವ ಜಾಸ್ತಿ ಇದೆ.

ಕಲಬೆರಕೆ, ಧಾರಣೆ ವ್ಯತ್ಯಯ

ಮಾರುಕಟ್ಟೆಯಲ್ಲಿ ರೈತರ ಹೆಸರಿನಲ್ಲಿ ಕಳಪೆ ಗುಣಮಟ್ಟದ ಅಡಿಕೆಯನ್ನು ಸ್ಥಳೀಯ ಅಡಿಕೆಯೊಂದಿಗೆ ಮಿಶ್ರಣ ಮಾಡಿ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ಅಡಿಕೆ ಧಾರಣೆ ಅವ್ಯಾಹತವಾಗಿ ಕುಸಿಯುತ್ತಿದೆ. ಧಾರಣೆ ಕುಸಿತದಿಂದಾಗಿ ಸೊಸೈಟಿಗೆ ರೈತರು ಹಾಕುವ ಅಡಿಕೆಯು ಕುಸಿತವಾಗಲಿದೆ.

ನಿಷ್ಕ್ರಿಯ ಸದಸ್ಯರ ಸಂಖ್ಯೆ ಹೆಚ್ಚಳ

ರೈತರದ್ದೇ ಸಂಸ್ಥೆಯಾಗಿರುವ ಮ್ಯಾಮ್ಕೋಸ್ ಸಂಸ್ಥೆಗೆ ಮಲೆನಾಡು ಭಾಗದಲ್ಲಿ ಶೇ.50ರಷ್ಟು ಭಾಗ ಅಡಿಕೆ ರವಾನೆ ಆಗುತ್ತದೆ. ಉಳಿದ ಭಾಗ ಮಂಡಿಗಳಿಗೆ ಹಾಗೂ ಇನ್ನಿತರ ಸಂಸ್ಥೆಗಳಿಗೆ ಹೋಗುತ್ತದೆ. ಬೆಳೆ ನಷ್ಟ ಕುಸಿತದಿಂದಾಗಿ ಸಂಸ್ಥೆಯಲ್ಲಿ ಈ ಭಾರಿ ನಿಷ್ಕ್ರಿಯ ಸದಸ್ಯರ ಸಂಖ್ಯೆ ಜಾಸ್ತಿಯಾಗಲಿದೆ ಎಂಬುದು ಸದಸ್ಯರ ಅಭಿಪ್ರಾಯವಾಗಿದೆ.

ಸರ್ವೇ ಕಾರ್ಯ ನಡೆಸಿ

ಬಯಲು ಸೀಮೆಯ ಭಾಗದ ಬೆಳೆಗಾರರಿಗೆ ತಮ್ಮ ಅಡಿಕೆಗೆ ಉತ್ತಮ ಧಾರಣೆ ಬರದೇ ಇದ್ದ ಪಕ್ಷದಲ್ಲಿ ಸೊಸೈಟಿಗಳಿಗೆ ಅಡಿಕೆ ಹಾಕದೇ ಉತ್ತಮ ಧಾರಣೆ ನೀಡುವ ದಲ್ಲಾಳಿಗಳಿಗೆ ತಮ್ಮ ಅಡಿಕೆಯನ್ನು ಮಾರಾಟ ಮಾಡಲು ಮುಂದಾಗುತ್ತಾರೆ. ಹಾಗೆಯೇ ಮಲೆನಾಡು ಭಾಗದ ರೈತರಿಗೆ ಬೆಳೆ ನಷ್ಟವಾದ ಸಂದರ್ಭದಲ್ಲಿ ಸಂಸ್ಥೆಗೆ ಅಡಿಕೆ ಹಾಕದೇ ವಿಮುಖರಾಗುತ್ತಾರೆ. ಈ ಬಗ್ಗೆ ಸಂಸ್ಥೆಯು ಸರ್ವೇ ಕಾರ್ಯ ನಡೆಸಿ ಬೆಳೆಗಾರರಿಗೆ ಉತ್ತಮ ಬೆಂಬಲ ನೀಡಿದ್ದಲ್ಲಿ ಸದಸ್ಯರು ನಿಷ್ಕ್ರಿಯರಾಗದೇ ಸಕ್ರಿಯರಾಗುತ್ತಾರೆ ಎಂಬುದು ರೈತರ ಅಭಿಪ್ರಾಯವಾಗಿದೆ.

ಸದಸ್ಯತ್ವ ಉಳಿಸಿಕೊಳ್ಳಲು ಪರದಾಟ

ಮ್ಯಾಮ್‌ಕೋಸ್ ಸಂಸ್ಥೆಯಲ್ಲಿ ಅಡಿಕೆ ಹಾಕದೇ ಇರುವ ಸಂದರ್ಭದಲ್ಲಿ ಸದಸ್ಯತ್ವ ರದ್ದಾಗುತ್ತದೆ ಎಂಬ ಕಾರಣದಿಂದ ಸದಸ್ಯರು ತಮ್ಮ ಹೆಸರಿನಲ್ಲಿ ಅಡಿಕೆ ಹಾಕಿ ವ್ಯವಹರಿಸುವಂತೆ ಇತರೆ ಸದಸ್ಯರು ಅಥವಾ ಸ್ಥಳೀಯ ಮಾರಾಟಗಾರರಲ್ಲಿ ತಿಳಿಸಿ ಅದರಂತೆ ವ್ಯವಹಾರ ನಡೆಸುತ್ತಿರುವುದು ಬೆಳೆಗಾರರು ಹೇಗಾದರೂ ಮಾಡಿ ಸದಸ್ಯತ್ವ ಉಳಿಸಿಕೊಳ್ಳಬೇಕೆಂಬ ಇಚ್ಛೆಯಲ್ಲಿದ್ದಾರೆ. ಇದು ಸಂಸ್ಥೆಯ ಮೇಲಿರುವ ವಿಶೇಷ ಕಾಳಜಿಯಾಗಿದೆ. ಆದರೆ ಯಾವುದೇ ವ್ಯವಹಾರ ನಡೆಸದೇ ನಾಮಕಾವಸ್ಥೆಗೆ ಸದಸ್ಯತ್ವ ಉಳಿಸಿಕೊಳ್ಳುವ ಸದಸ್ಯರೂ ಇದ್ದಾರೆ.

Hosadigantha
Pg.16

Coffee prices are going up

Bengaluru cafes are citing the global coffee crisis and increasing prices by 10-20%

ASRA MAVAD
TEAM METROLIFE

Cafes and restaurants in Bengaluru are increasing the price of their coffee as bean prices rise.

Internationally, bean prices have risen up to 60% in the last three months. Karnataka is India's biggest coffee grower, and prices in India have also been on the rise. The price of roasted coffee beans has increased by Rs 100-200 in the last three months. It currently costs between Rs 800 and Rs 1,200 for 1 kg of roasted coffee beans.

At The Caffeine Baar, with outlets on Church Street and in Jayanagar, a cup of cappuccino is going up from Rs 200 to Rs 220 in the next 10 days. The cafe uses Arabica beans. "With prices shooting up by 40%, we had to make this decision. While we are not worried about the customers on Church Street, we are a little wary about how the Jayanagar crowd will react," says Poojya Prasad, cofounder. The cafe's most expensive coffee is priced at Rs 320.

At Maverick and Farmer, with branches in Halasuru and Koramangala, prices are set to go up by 10 to 20% in the new year. "We are taking a bit of a hit currently. We are working on a new pricing to counter this," says Ashish D'abreo, cofounder. Currently, a hot coffee ranges between Rs 180 and Rs 290, and a cold coffee between Rs 250 and Rs 340. The brand is eliminating chocolate products. "Chocolate prices have also been rapidly increasing. This way we can balance things out," he adds.

A price hike is inevitable, says Nikhil Menon, chief operating officer, Mannheim Speciality Roasts. "At one point this year, the price of robusta was higher than that of Arabica. That is unheard of. It has been a bad two years for the industry," he says. The brand plans to increase prices towards the end of the year. Its coffee prices range from Rs 120 to Rs 225.

Waiting it out

Indiranagar-based Humble Bean Coffee is preparing for an increase in the upcoming financial year, says Soomanna M M, cofounder. Nerlu, with outlets in Gandhi Nagar and Indiranagar, hopes to hold out for as long as possible.

"Lately, we have been paying 10-15% more to our roaster, but that is not reflected on our menu. We are trying to balance it out," says Shibani Murlidhar, cofounder. A coffee at Nerlu averages at Rs 220.

A cafe chain, with an outlet on Church Street and another in Jayanagar, is increasing its coffee prices in November. DH PHOTO/PUSHKAR V

IMPACT ON FILTER COFFEE

Darshinis have increased the price of their filter coffee by Rs 2 to Rs 5. A coffee is now priced between Rs 12 and Rs 35.

Vidyarthi Bhavan in Gandhi Bazaar increased the price of its filter coffee from Rs 23 to Rs 25 in May. Arun Adiga, owner, is mulling a second hike. "This does not just have to do with the coffee crisis. Prices of almost all raw materials are increasing. Due to the rains, vegetable prices are sky high. So, if there is a price hike, it will be a result of all these factors," he says.

WHAT'S THIS CRISIS?

Coffee prices are soaring as climate events have impacted production in major coffee-growing regions, such as Vietnam and Brazil. India's exports have gone up as a result.

Prices for the Arabica bean are up by approximately 40% as a result of the shortage in production of the usually cheaper robusta beans.

Industry experts believe the price will continue to rise in the foreseeable future.

Deccan
Herald
Pg.3a